ದಿನಾಂಕಃ18/11/2025 ಓ ಎಸ್.201/2024 ಪಿ ಡಬ್ಲೂ-01

**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಂ ಎನ್ ಎಮ್ ವಕೀಲರಿಂದಃ**

1. ನಾನು 3 ವರ್ಷದಿಂದ ಸ್ಟಾಪ್ ನರ್ಸ್ ಆಗಿ ಕೆಲಸ ಮಾಡುತಿದ್ದೇನೆ. ನಾನು ಬೆಂಗಳೂರಿನಲ್ಲಿ ವಾಸ ಇದ್ದೇನೆ. ಅದಕ್ಕು ಮೊದಲು ನಾನು ನಮ್ಮ ಊರಾದ ಹುಲ್ಲೂರಿನಲ್ಲಿದ್ದೆ. ನನ್ನ ತಂದೆಯ ಖಾಯಂ ವಾಸ ಹುಲ್ಲೂರು ಎಂದರೆ ಹೌದು. ನನ್ನ ತಾಯಿ ಮದುವೆಯಾದಾಗಿನಿಂದ ಹುಲ್ಲೂರಿನಲ್ಲಿ ವಾಸ ಎಂದರೆ ಹೌದು. ನನ್ನ ತಂದೆ ತಾಯಿ ಮದುವೆ ನಂತರ ವಾಸಸ್ಥಳ ಎಂದೂ ಬದಲಾಯಿಸಿಲ್ಲ ಎಂದರೆ ಹೌದು. ನನ್ನ ತಾಯಿ ಗೃಹಿಣಿ ಅವರಿಗೆ ಆದಾಯ ಬರುವ ರೀತಿ ಯಾವುದೇ ಕೆಲಸ ಇಲ್ಲ ಎಂದರೆ ಹೌದು. ನಾನು ನರ್ಸಿಂಗ್ ಮಾಡಿಕೊಂಡು ಈಗ ಕೆಲಸಕ್ಕೆ ಹೋಗುತ್ತಾ ಇದ್ದೇನೆ. 2 ನೇ ವಾದಿ ಪ್ಯಾರಾ ಮೆಡಿಕಲ್ ಮಾಡಿ ಕೆಲಸ ಮಾಡುತಿದ್ದಾಳೆ. ನನ್ನ ತಮ್ಮ ದ್ವಿತೀಯ ಪಿಯುಸಿ ಓದುತಿದ್ದಾನೆ. ನಮ್ಮ ಮೂರು ಜನದ ವಿದ್ಯಾಬ್ಯಾಸ ನನ್ನ ತಾಯಿ ಮಾಡಿಸಿದ್ದಾರೆ. ನನ್ನ ತಂದೆ ವಿದ್ಯಾಬ್ಯಾಸ ನಮಗೆ ಮಾಡಿಸಿದ್ದರೂ ಕೂಡ ತಾಯಿ ಮಾಡಿಸಿರುತ್ತಾರೆ ಅಂತ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆಲಸಕ್ಕೆ ಹೋಗುವ ಮುಂಚೆ ನನಗೆ ಯಾವುದೇ ಆದಾಯದ ಮೂಲ ಇರಲಿಲ್ಲ ಎಂದರೆ ಹೌದು. ನನ್ನ ತಂಗಿ ಮತ್ತು ತಮ್ಮನಿಗೂ ಕೂಡ ವಿದ್ಯಾಬ್ಯಾಸ ಮಾಡುವಾಗ ಆದಾಯದ ಮೂಲ ಇರಲಿಲ್ಲ ಎಂದರೆ ಹೌದು. ನಮ್ಮ ವಿದ್ಯಾಬ್ಯಾಸಕ್ಕೆ ಇದುವರೆಗೂ ಸಾಕಷ್ಟು ಖರ್ಚಾಗಿದೆ ಎಂದರೆ ಹೌದು.

2. ನಮ್ಮ ಕುಟುಂಬದಲ್ಲಿ 5 ಜನ ಸದಸ್ಯರಿದ್ದೇವೆ ಎಂದರೆ ಹೌದು. ನಮ್ಮ ಕುಟುಂಬಕ್ಕೆ ಅಂದಾಜು 10 ಸಾವಿರ ಮನೆಖರ್ಚುಗೆ ಬೇಕಾಗುತಿತ್ತು. ನನ್ನ ತಂದೆ 10 ನೇ ತರಗತಿ ತನಕ ವಿದ್ಯಾಬ್ಯಾಸ ಮಾಡಿರುವುದಾಗಿ ಹೇಳಿರುತ್ತಾರೆ. ಅವರಿಗೆ ಕೆಟ್ಟ

ಹವ್ಯಾಸ ಇಲ್ಲ ಎಂದರೆ ಸರಿಯಲ್ಲ. ಅವರು ಜೂಜು ಆಡುತಿದ್ದರು, ಕೆಸಿನೋ ಆಡುತಿದ್ದರು ಅದರಲ್ಲೆ ಹೆಚ್ಚಿನ ಸಮಯ ಕಳೆದಿರುತ್ತಾರೆ. ನಮ್ಮ ತಂದೆ ಜೂಜು ಆಡುವುದು ಯಾವಾಗಿನಿಂದ ಗೊತ್ತಾಯಿತು ಎಂದರೆ ನಮಗೆ ಬುದ್ದಿ ಬಂದಾಗಿನಿಂದ ಎಂದು ಹೇಳುತ್ತಾರೆ. ಜೂಜಾಡುವುದು ಅಪರಾದ ಎಂದರೆ ಹೌದು. ನಮ್ಮ ತಂದೆ ಜೂಜಾಡುತ್ತಾರೆ ಎಂದು ದೂರು ನಾವು ಕೊಟ್ಟಿಲ್ಲ. ನಮ್ಮ ತಂದೆಯದು ಖುಷ್ಕಿ ಜಮೀನು ಮಳೆ ಬಂದರೆ ಮಾತ್ರ ಬೆಳೆ ಎಂದರೆ ಹೌದು. ನಮ್ಮ ತಂದೆ ಜೂಜಾಡುತಿದ್ದರು ಅವರಿಗೆ ಸಾಕಲು ಅರ್ಹತೆ ಇಲ್ಲ ಅಂತ ಜೀವನಾಂಶ ಕೇಸ್ ಏನಾದರೂ ಕೊಟ್ಟಿದ್ದೀರಾ ಎಂದರೆ ಇಲ್ಲ. ನಮಗೆ ಅಂತ ನಾವು ಶೆಡ್ ಹಾಕಿಕೊಂಡು ವಾಸ ಇದ್ದೇವೆ. ನಮಗೆ ಸ್ವಂತ ಮನೆ ಇದೆ ಆದರೂ ಇಲ್ಲ ಅಂತ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿ ನಮ್ಮ ತಾತ ಮುತ್ತಾತನಿಂದ ಬಂದಿದೆ ಅಂತ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2013 ರಲ್ಲಿ ಐಟಂ ನಂ.3 ಆಸ್ತಿ ನಮ್ಮ ತಂದೆ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಅದು ನಮ್ಮ ತಾತನ ಆಸ್ತಿ ನಮ್ಮ ತಂದೆ ಹೆಸರಿನಲ್ಲಿ ಇದೆ ಅನ್ನುವುದು ನಮಗೆ ಗೊತ್ತಿರಲಿಲ್ಲ ನಮಗೆ ಒಂದು ನೋಟೀಸು ಬಂದ ನಂತರ ತಂದೆ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ಗೊತ್ತಾಯಿತು. ಆ ನೋಟೀಸು 10 ವರ್ಷದ ಹಿಂದೆ ಬಂದಿರುತ್ತದೆ. ಆ ನೋಟೀಸು ಓದಿ ನನ್ನ ತಂದೆ ಹೆಸರಿನಲ್ಲಿ ಖಾತೆ ಇರುವ ವಿಚಾರ ನನ್ನ ದೊಡ್ಡಪ್ಪ ಹೇಳಿದರು. ಆಗ ನಾನು ನಮ್ಮ ತಂದೆ ಹೆಸರಿನಲ್ಲಿ ಇರುವ ಖಾತೆ ನೋಡಿದೆ. ದಾವಾ ಐಟಂ ನಂ.3 ಆಸ್ತಿ ಸಂಪೂರ್ಣವಾಗಿ ನನ್ನ ತಂದೆ ಮಾಲೀಕತ್ವದಲ್ಲಿ ಇರುವ ಆಸ್ತಿ ಎಂದರೆ ಸರಿಯಲ್ಲ.

4. 2 ನೇ ಪ್ರತಿವಾದಿ ನನ್ನ ತಂದೆ ತಾಯಿ ವಿರುದ್ದ ಒಂದ ಕೇಸ್ ಹಾಕಿರುತ್ತಾರೆ ಎಂದರೆ ಹೌದು. ಆ ಕೇಸ್ ನ ನಂಬರ್ 152/2024 ಎಂದರೆ ಅದು ನನಗೆ ಗೊತ್ತಿಲ್ಲ. ಆ ಕೇಸ್ ನ ಬಗ್ಗೆ ದಾವಾದಲ್ಲಿ ಬರೆಸಿರುತ್ತೇನೋ ಇಲ್ಲವೊ ಅನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಕೇಸಿಗೆ ನಾವು ಮಾಹಿತಿ ಕೊಟ್ಟಿರುತ್ತೇವೆ. 2 ನೇ ಪ್ರತಿವಾದಿ ಓ

ಎಸ್.152/2024 ದಾವೆ ಹಾಕಿದ ನಂತರ ನಾವು ಈ ಕೇಸು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಓ ಎಸ್.152/2024 ರಲ್ಲಿ ನಾವು ಪಕ್ಷಗಾರರಾಗಿಲ್ಲ ಎಂದರೆ ಹೌದು. 2 ನೇ ಪ್ರತಿವಾದಿ ಓ ಎಸ್.152/2024 ಯಾವ ಆಸ್ತಿ ವಿಚಾರವಾಗಿ ಸಲ್ಲಿಸಿದ್ದಾರೆ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ನಾನು ನನ್ನ ತಂದೆ ಹತ್ತಿರ ಪಾಲು ವಿಬಾಗ ಕೇಳಿಲ್ಲ ಎಂದರೆ ಹೌದು. ನಾನು ನಮ್ಮ ಸಹ ಕುಟುಂಬದ ಆಸ್ತಿ ಅಂತ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆ ದಾಖಲೆ ಪಹಣಿ ಆಗಿರುತ್ತದೆ. ಆ ದಾಖಲೆ ಪ್ರಕಾರ ಐಟಂ ನಂ.3 ಆಸ್ತಿ ನಮ್ಮ ಕುಟುಂಬದ ಆಸ್ತಿ ಅಂತ ಎಲ್ಲಿಯೂ ನಮೂದು ಇಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಆಸ್ತಿ ಮಾರಾಟ ಮಾಡಬೇಕು ಅಂದರೆ ಮಾಲೀಕರಿಗೆ ಮಾತ್ರ ಮಾರಾಟ ಮಾಡಲು ಹಕ್ಕು ಎಂದರೆ ಸರಿಯಲ್ಲ. ಯಶವಂತ್ ರೆಡ್ಡಿ ಯಾರು ಅಂತ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ವಿಳಾಸ ನಾನೇ ಕೊಟ್ಟಿರುತ್ತೇನೆ. ಅವರನ್ನು ಯಾಕೆ ಸೇರಿಸಿದ್ದೀರಾ ಎಂದರೆ ನನ್ನ ತಾತನ ಆಸ್ತಿಯಲ್ಲಿ ಅವರ ಹೆಸರು ಓಡುತಿತ್ತು ಆದ್ದರಿಂದ ಎಂದು ಹೇಳುತ್ತಾರೆ. ಐಟಂ ನಂ.3 ಆಸ್ತಿಯಲ್ಲಿ 2 ನೇ ಪ್ರತಿವಾದಿ ಹೆಸರು ಓಡುತಿತ್ತು. ಐಟಂ ನಂ.3 ಆಸ್ತಿ ನನ್ನ ತಂದೆ 2 ನೇ ಪ್ರತಿವಾದಿಗೆ ದಿಃ03.04.2013 ರಂದು ಕ್ರಯದ ಕರಾರು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ವಿರುದ್ದ 2 ನೇ ಪ್ರತಿವಾದಿ ಆಸ್ತಿ ಬರೆದುಕೊಡಿ ಅಂತ ಓ ಎಸ್.330/2014 ರಂತೆ ನಿರ್ದಿಷ್ಟ ಪರಿಹಾರಕ್ಕಾಗಿ ದಾವೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಆ ದಾವೆ 2 ನೇ ಪ್ರತಿವಾದಿ ಪರ ಡಿಕ್ರಿ ಯಾಗಿದೆ ಎಂದರೆ ಹೌದು. ಆ ಡಿಕ್ರಿ ಆದಾರದ ಮೇಲೆ 2 ನೇ ಪ್ರತಿವಾದಿ ಅಮಲ್ಜಾರಿ ಕೇಸ್ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆ ಅಮಲ್ಜಾರಿ ಅರ್ಜಿಯಲ್ಲಿ ನ್ಯಾಯಾಲಯವು 2 ನೇ ಪ್ರತಿವಾದಿಗೆ ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಇಲ್ಲ. ಕ್ರಯಪತ್ರ ಆದ ದಿನಾಂಕದಿಂದ 2 ನೇ ಪ್ರತಿವಾದಿಯೇ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

5. 2 ನೇ ಪ್ರತಿವಾದಿ ನನ್ನ ತಂದೆ ತಾಯಿ ವಿರುದ್ದ ಓ ಎಸ್.585/2022 ರಂತೆ ಶಾಶ್ವತ ನಿರ್ಬಂದಾಜ್ಞೆಗೆ ಕೇಸ್ ಹಾಕಿದ್ದಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಆ ದಾವೆ

2 ನೇ ಪ್ರತಿವಾದಿ ಪರ ಡಿಕ್ರಿ ಆಗಿದೆ ಎಂದರೆ ಗೊತ್ತಿಲ್ಲ. ನಮ್ಮ ತಂದೆ ತಾಯಿ 2 ನೇ ಪ್ರತಿವಾದಿ ಸ್ವಾದೀನಕ್ಕೆ ತೊಂದರೆ ಕೊಟ್ಟಿದ್ದರಿಂದ 2 ನೇ ಪ್ರತಿವಾದಿ ಪೊಲೀಸ್ ದೂರು ಕೊಟ್ಟಿದ್ದಾರೆ ಎಂದರೆ ಇಲ್ಲ. ಆಗ ನನ್ನ ತಂದೆಗೆ ಕರೆಸಿ ಬುದ್ದಿವಾದ ಹೇಳಿದ್ದಾರೆ ಎಂದರೆ ಇಲ್ಲ. 2 ನೇ ಪ್ರತಿವಾದಿ ಚಿತ್ರದುರ್ಗದಲ್ಲಿ ವಾಸ ಇರುವುದನ್ನು ದುರುಪಯೋಗಪಡಿಸಿಕೊಂಡು 2024 ಏಪ್ರಿಲ್ ತಿಂಗಳಲ್ಲಿ ಐಟಂ ನಂ.3 ಆಸ್ತಿಯಲ್ಲಿ ಅತಿಕ್ರಮಣ ಮಾಡಿ ವ್ಯವಸಾಯ ಮಾಡಿರುತ್ತಾರೆ ಎಂದರೆ ಎಂದರೆ ಸರಿಯಲ್ಲ. ಈ ಕಾರಣದಿಂದ 2 ನೇ ಪ್ರತಿವಾದಿ ಓ ಎಸ್.152/2024 ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ 3 ನೇ ದಾವಾ ಆಸ್ತಿ ಯಲ್ಲಿ ಸಂಪೂರ್ಣ ಹಕ್ಕು ಇರುವುದರಿಂದ ಅದನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 3 ನೇ ದಾವಾ ಆಸ್ತಿಯನ್ನು ಮಾರಾಟ ಮಾಡಲು ಸಂಪೂರ್ಣ ಹಕ್ಕು ಅದಿಕಾರ ಇತ್ತು ಎಂದರೆ ಸರಿಯಲ್ಲ. ಅವರಿಗೆ ಹಕ್ಕು ಅದಿಕಾರ ಇದ್ದುದರಿಂದ ನನ್ನ ತಂದೆಯವರ ತೀರ್ಮಾನಗಳನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. 3 ನೇ ದಾವಾ ಆಸ್ತಿಯನ್ನು ಕುಟುಂಬದ ಅವಶ್ಯಕತೆಗೆ ಮಾರಾಟ ಮಾಡಿಲ್ಲ ಅಂತ ತೋರಿಸಲು ಯಾವುದೇ ಪುರಾವೆ ಇಲ್ಲ ಎಂದರೆ ಇಲ್ಲ ಸಾಕ್ಷಿ ಸ್ವತಃ ಹೇಳುವುದೇನೆಂದರೆ ನಮ್ಮ ತಂದೆ ಕೇಸಿನೊಗೆ ಮಾರಾಟ ಮಾಡಿರಬಹುದು ನಮ್ಮ ಸಹಿಗಳನ್ನು ಪಡೆಯದೇ ಮಾರಾಟ ಮಾಡಿರುತ್ತಾರೆ ಮತ್ತು ಮಾರಾಟ ಮಾಡಿದ್ದಾರೋ ಇಲ್ಲವೊ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಸದ್ಬಾವನೆ ಖರೀದಿದಾರರು ಎಂದರೆ ಸರಿಯಲ್ಲ. ನನ್ನ ತಾಯಿ ತಂದೆ ಇಬ್ಬರು ಓ ಎಸ್.152/2024 ರಲ್ಲಿ ತಕರಾರು ಸಲ್ಲಿಸಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ ಎಂದರೆ ಗೊತ್ತಿಲ್ಲ. 3 ನೇ ದಾವಾ ಆಸ್ತಿ ನನ್ನ ತಂದೆಗೆ ಬಿಟ್ಟು ಬೇರೆ ಯಾರಿಗೂ ಹಕ್ಕು ಅದಿಕಾರ ಇಲ್ಲ ಎಂದರೆ ಸರಿಯಲ್ಲ. ನಾವು ನನ್ನ ತಂದೆ ಚಿತಾವಣೆ ಮೇರೆಗೆ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹಿಂದೆ ಮಾರಾಟ ಮಾಡಿರುವ ಆಸ್ತಿಯನ್ನು ಪುನಃ ಉಳಿಸಿಕೊಳ್ಳಬೇಕು ಎನ್ನುವ ಕಾರಣಕ್ಕೆ ನನ್ನ ತಂದೆ ಮೇಲೆ ವಿನಾಕಾರಣ ಆರೋಪ ಮಾಡಿರುತ್ತೇನೆ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಅಂಶ ಹೇಳಿ ಸುಳ್ಳು ಸಾಕ್ಷಿ ನುಡಿಯು

ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಪರಿಹಾರ ಪಡೆಯಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**